**<u>ಸಾಕ್ಷಿಯನ್ನು ದಿನಾಂಕ 23-09-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್.ಭಟ್ಟರಿಂದಃ</u>**

ವಕೀಲರು ನೋಟಿಸು ನೀಡುವಾಗ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದನ್ನು ನಾನು ಓದಿದ್ದೇನೆ. ಸದರಿ ನೋಟಿಸಿನಲ್ಲಿ ಬರೆದಿರುವ ವಿಚಾರಗಳು ಸರಿ ಇದೆ. ನೋಟಿಸನಲ್ಲಿ ಆರೋಪಿಯು ರೂ.6,50,000/- ಚೆಕ್ಕನ್ನು ನನ್ನ ಸಮಕ್ಷಮದಲ್ಲಿ ಬರೆದು ನನಗೆ ಕೊಟ್ಟಿರುವುದಾಗಿ ಹೇಳಿದ್ದು, ಅದು ನಿಜವಿರುತ್ತದೆ. ಆರೋಪಿ ಸ್ವತಃ ನನ್ನ ಸಮಕ್ಷಮ ಚೆಕ್ಕಿನ ಮೇಲೆ ರೂ.6,50,000/- ಬರೆದು ನನ್ನ

ಸಮಕ್ಷಮದಲ್ಲಿ ಅದರಲ್ಲಿ ಸಹಿ ಮಾಡಿ ಕೊಟ್ಟಿರುತ್ತಾನೆ. ಚೆಕ್ಕಿನ ಮೇಲಿನ ಬರವಣಿಗೆ ಮತ್ತು ಸಹಿ ಮಾಡಲು ಆರೋಪಿ ಒಂದೇ ಪೆನ್ನನ್ನು ಬಳಸಿರುತ್ತಾನೆ. ಆರೋಪಿಯು ನನ್ನ ಬಳಿ ಮೂರು ಬಾರಿ ಹಣ ತೆಗೆದುಕೊಂಡು ಹೋಗಿದ್ದು, ಕೊನೆಯ ಬಾರಿ ಹಣ ತೆಗೆದುಕೊಂಡು ಹೋಗುವ ಕಾಲಕ್ಕೆ ಚೆಕ್ಕನ್ನು ಕೊಟ್ಟಿರುತ್ತಾನೆ.

ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಶಿರಸಿಯ ಹೆಗಡೆ ಕಟ್ಟಾದಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಹೆಸರಿನಲ್ಲಿ ಶಿರಸಿಯಲ್ಲಿ ಯಾವುದೇ ಜಮೀನು ಇಲ್ಲ. ನಾನು ಹೊನ್ನಾವರಕ್ಕೆ ಕಳೆದ 23 ವರ್ಷಗಳ ಹಿಂದೆ ಬಂದಿರುತ್ತೇನೆ. ನಾನು ಹೊನ್ನಾವರಕ್ಕೆ ಬಂದಾಗ ಪೌರೋಹಿತ್ಯ ಮಾಡುತ್ತಿದ್ದೆ, ಕಳೆದ 18 ವರ್ಷಗಳ ಹಿಂದೆ ದೇವಸ್ಥಾನದಲ್ಲಿ ನಾನು ಪೂಜೆ ಮಾಡುತ್ತಿದ್ದೇನೆ. ಪೌರೋಹಿತ್ಯ ಮಾಡಲು ನಾನು ಸ್ವರ್ಣವಲ್ಲಿ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೆ. ಈ ಬಗ್ಗೆ ದೃಢೀಕರಣ ಪತ್ರ ಇದೆ. ಗೇರುಸೊಪ್ಪದ ವೀರಾಜನೇಯ ಸ್ವಾಮಿ ದೇವಸ್ಥಾನದಲ್ಲಿ ಪೂಜಾರಿಯಾಗಿ ಕೆಲಸ ಮಾಡಿಲ್ಲ, ಹೋಗಿ ಬಂದು ಮಾಡುತ್ತೇನೆ. ಸದರಿ ದೇವಸ್ಥಾನದ ಮುಖ್ಯ ಅರ್ಚಕರಿಗೂ ಮತ್ತು ನನಗೂ ಬಹಳ ವಿಶ್ವಾಸ ಇತ್ತು ಎಂದರೆ ಸರಿಯಲ್ಲ. ಸದರಿ ದೇವಸ್ಥಾನದಲ್ಲಿ ಸುಮಾರು 7-8 ವರ್ಷಗಳ ಕಾಲ ಪರಿಚಾರಕರಾಗಿ ಕೆಲಸ ಮಾಡಿದ್ದೇನೆ ಎಂದರೆ ಸರಿಯಲ್ಲ.

ಹೊನ್ನಾವರದ ದುಗ್ಗೂರು ಗ್ರಾಮದಲ್ಲಿ 10 ಗುಂಟೆ ಜಮೀನು ಇದೆ. ಅದನ್ನು ಈಗ್ಗೆ ನಾಲ್ಕುವರೆ 5 ವರ್ಷಗಳ ಹಿಂದೆ ಖರೀದಿಸಿದ್ದೇನೆ. ಸದರಿ ಜಮೀನಿನಲ್ಲಿ ಯಾವುದೇ ಬೆಳೆ ಬೆಳೆಯುವುದಿಲ್ಲ. ಅದರಿಂದ ನನಗೆ ಯಾವುದೇ ಉತ್ಪನ್ನ ಇಲ್ಲ. ಹೊನ್ನಾವರ ನಗರದಲ್ಲಿ ನನಗೆ ಸ್ವಂತ ಮನೆ ಇಲ್ಲ. ಹೊನ್ನಾವರದ ರಾಮೇಶ್ವರ ದೇವಸ್ಥಾನದಲ್ಲಿ ಅರ್ಚಕರಾಗಿ ಕೆಲಸ ಮಾಡುತ್ತಿದ್ದೇನೆ, ಅದು ಮುಜರಾಯಿಗೆ ಸೇರಿಲ್ಲ, ಖಾಸಗಿ ದೇವಸ್ಥಾನ. ಅದು ಕಾರ್ಕಳ ವೈದ್ಯರ ಕುಟುಂಬಕ್ಕೆ ಸೇರಿದೆ ಎಂದರೆ ಸರಿ. ದೇವಸ್ಥಾನದಿಂದ ನನಗೆ ಪ್ರತಿ ತಿಂಗಳು ರೂ.15,000/- ಸಂಬಳ ಕೊಡುತ್ತಾರೆ. ನನಗೆ ಒಬ್ಬ ಮಗ ಇದ್ದು, ನಾನು ಮತ್ತು ನನ್ನ ಹೆಂಡತಿ ಮತ್ತು ಮಗ ಸದರಿ ಆದಾಯದಿಂದ ಜೀವನ ಸಾಗುತ್ತಿದ್ದೇವೆ. ದೇವಸ್ಥಾನಕ್ಕೆ ಸೇರಿದಾಗ ಮೊದಲು ರೂ.5,000/- ವೇತನ ಬರುತ್ತಿತ್ತು. 2012 ರಲ್ಲಿ ರೂ.15,000/- ಆಯಿತು. ವೇತನವನ್ನು ನಗದು ರೂಪದಲ್ಲಿ ಕೊಡುತ್ತಾರೆ. ಸದರಿ ದೇವಸ್ಥಾನ ಕುಟುಂಬದ ದೇವಸ್ಥಾನವಾಗಿದ್ದರಿಂದ ನನಗೆ ಕೇವಲ ರೂ.7,000/- ವೇತನ ಕೊಡುತ್ತಾರೆ ಎಂದರೆ ಸರಿಯಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**